**ಕತೆ**

**ಅಲಕ ತೀರ್ಥಹಳ್ಳಿ**

# ಸರೋಜಮ್ಮನ ಸೊಸೆ



ತಾಳಗುಪ್ಪದಲ್ಲಿ, ಧರ್ಮಸ್ಥಳದ ಸಂಘದವರಿಂದ ಮದ್ಯವ್ಯಸನ ವರ್ಜನ ಶಿಬಿರದ ಸಂಘಟಕನಾಗಿ, ಕಾರ್ಯಕರ್ತನಾಗಿ ಶೋಭಾಳಿಗಿಂತಲೂ ಹೆಚ್ಚು ಕೆಲಸಮಾಡಿದವನು ರಾಜೇಶ. ಏಳು ದಿನಗಳ ಈ ಶಿಬಿರಕ್ಕೆ ಒಂದು ಸಾವಿರ ಜನರನ್ನಾದರೂ ಸೇರಿಸಬೇಕೆಂಬ ಗುರಿಯನ್ನಿಟ್ಟುಕೊಂಡು ಕೆಲಸಮಾಡುತ್ತಿದ್ದ ಅವನು. ಊರಿನಲ್ಲಿ ಕದ್ದು ಹೆಂಡ ಕುಡಿಯುವವರು ಸಾರ್ವಜನಿಕವಾಗಿ ನಡೆಯುವ ಈ ಶಿಬಿರದಲ್ಲಿ ಪಾಲ್ಗೊಳ್ಳಲು ಹಿಂದೇಟು ಹಾಕುತ್ತಿದ್ದರು. ಮೊದಮೊದಲು ಮರ್ಯಾದೆ ಬಿಟ್ಟು ರಾಜಾರೋಷವಾಗಿ ಕುಡಿಯುತ್ತಿದ್ದವರು ಬರೀ 40–50 ಮಂದಿ ಮಾತ್ರ ನೋಂದಾವಣೆಗೆ ಸಿಕ್ಕರು. ಆಮೇಲೆ ಅವರೇ ಕೊಟ್ಟ



ಮಾಹಿತಿಯನ್ನು ಅನುಸರಿಸಿ, ಜನರನ್ನು ಒತ್ತಾಯಿಸಿ, ಮನವೊಲಿಸಿ ಇನ್ನೂ 50–60 ಜನರನ್ನು ನೋಂದಾಯಿಸಿ ಕೊಂಡರು. ನಮ್ಮವನೇ ಆದ ಈ ರಾಜೇಶ ನಮ್ಮ ಶ್ರಮವನ್ನೆಲ್ಲಾ ಮಣ್ಣುಮಾಡುತ್ತಿದ್ದಾನಲ್ಲ ಎಂದು ಅವನೊಂದಿಗೇ ಮೊದಲು ಕಳ್ಳಭಟ್ಟಿಯ ಕೆಲಸಮಾಡುತ್ತಿದ್ದ ಕೆಲವರು ಸ್ವತಂತ್ರವಾಗಿ ಅದೇ ದಂಧೆಗೆ ಇಳಿದಿದ್ದರು. ಅಬಕಾರಿ ಅಧಿಕಾರಿಗಳೊಂದಿಗೆ ಒಳಒಪ್ಪಂದ ಮಾಡಿಕೊಂಡು ಅಧಿಕೃತ